ವಿಷಯ : ಗದಗನಲ್ಲಿ ಧಾರವಾಡದಲ್ಲಿರುವ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ನಡೆಸುವ ಬಗ್ಗೆ ,

ಚುಕ್ಕೆ ಗುರುತಿಲ್ಲದ ಪ್ರಶ್ನೆ 374(334)

ಶ್ರೀ ಡಿ.ಆರ್. ಪಾಟೀಲ್ (ಗದಗ್)

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ .

ಅ) ಗದಗನ ಧಾರವಾಡದಲ್ಲಿರುವ ಜಿಲ್ಲಾ ನ್ಯಾಯಾಲಯ ನಡೆಸುವಂತೆ ಗದಗ ವಕೀಲರ ಸಂಘದಿಂದ ಮನವಿ ಸರ್ಕಾರಕ್ಕೆ ಬಂದಿದೆಯೇ ;

ಆ) ಬಂದಿದ್ದರೆ ಸರ್ಕಾರ ಈ ಬೇಡಿಕೆ ಈಡೇರಿಸಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಹೌದು.

ಆ) ಮಾನ್ಯ ಉಚ್ಚನ್ಯಾಯಾಲಯದ ಪರಿಶೀಲನೆಯಲ್ಲಿದೆ.

ವಿಷಯ : ಸಣ್ಣ ನೀರಾವರಿ ಇಲಾಖೆಯ ಬೆಂಗಳೂರು ಹಾಗೂ ಬಿಜಾಪುರದ ವ್ಯಾಪ್ತಿಗೆ ಬರುವ ಪ್ರದೇಶಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 375 (335)

ಶ್ರೀ ಡಿ. ಆರ್ ಪಾಟೀಲ್(ಗದಗ್)

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಬೆಂಗಳೂರು ಹಾಗೂ ಬಿಜಾಪುರಗಳಲ್ಲಿನ ಕಛೇರಿಯ ವ್ಯಾಪ್ತಿಗೆ ಬರುವ ಪ್ರದೇಶಗಳು ಯಾವುವು;

ಆ) ಈ ಎರಡು ಕಛೇರಿಗಳಿಗೆ ಅಭಿವೃದ್ಧಿ ಕೆಲಸಗಳಿಗಾಗಿ 1992-93 ರಿಂದ 1994-95ರ ವರೆಗೆ ಒದಗಿಸಲಾಗಿರುವ ಹಣಕಾಸು ಎಷ್ಟು;

ಇ) ಬೆಂಗಳೂರು ಹಾಗೂ ಬಿಜಾಪುರಗಳಲ್ಲಿ ಕಛೇರಿಗೆ ಹೊಂದಿರುವ ಮುಖ್ಯ ಇಂಜಿನಿಯರ್‌ಗಳಿಗೆ ಒದಗಿಸಲಾಗಿರುವ ವೆಚ್ಚದ ವಿವರಗಳನ್ನು 91-92 ರಿಂದ 1993-94ರ ವರೆಗೆ ಪ್ರತ್ಯೇಕ ವಿವರ ನೀಡುವುದು.

ಶ್ರೀ ಎಂ.ಪಿ. ಕೇಶವ ಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಸಣ್ಣ ನೀರಾವರಿ (ದಕ್ಷಿಣ) ವಲಯದ ಕಛೇರಿಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಜಿಲ್ಲೆಗಳು ಬರುತ್ತವೆ

1. ಬೆಂಗಳೂರು (ನಗರ)
2. ಬೆಂಗಳೂರು(ಗ್ರಾಮಾಂತರ)
3. ಕೋಲಾರ
4. ತುಮಕೂರು
5. ಚಿತ್ರದುರ್ಗ
6. ಶಿವಮೊಗ್ಗ
7. ಮೈಸೂರು
8. ಮಂಡ್ಯ
9. ಹಾಸನ
10. ಚಿಕ್ಕಮಗಳೂರು
11. ದಕ್ಷಿಣ ಕನ್ನಡ
12. ಕೊಡಗು

ಸಣ್ಣ ನೀರಾವರಿ (ಉತ್ತರ) ವಲಯದ ಕಛೇರಿಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಜಿಲ್ಲೆಗಳು ಬರುತ್ತವೆ

1. ಬಿಜಾಪುರ
2. ಧಾರವಾಡ
3. ಬೆಳಗಾಂ
4. ಉತ್ತರ ಕನ್ನಡ
5. ಗುಲ್ಬರ್ಗಾ
6. ಬೀದರ್
7. ರಾಯಚೂರು
8. ಬಳ್ಳಾರಿ

ಆ) ಎರಡೂ ವಲಯಗಳಿಗೆ ಅಭಿವೃದ್ಧಿ ಕೆಲಸಗಳಿಗಾಗಿ ವರ್ಷವಾರು ಒದಗಿಸಿರುವ ಅನುದಾನ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಸಣ್ಣ ನೀರಾವರಿ (ದ) ವಲಯ, ಬೆಂಗಳೂರು (ಲಕ್ಷ ರೂ.ಗಳಲ್ಲಿ)	ಸಣ್ಣ ನೀರಾವರಿ (ಉ) ವಲಯ ಬಿಜಾಪುರ (ಲಕ್ಷ ರೂಗಳಲ್ಲಿ)	ಷರಾ
1992-93	3316.33	-	1992-93
1993-94	3673.31	3794.56	ಸಾಲಿನಲ್ಲಿ ಎರಡು
1994-95	4046.01	3572.23	ಸಣ್ಣ ನೀರಾವರಿ ವಲಯಗಳನ್ನು ರಚಿಸಲಾಗಿದೆ. 1993-94

ಸಾಲಿನಿಂದ
ಪ್ರತ್ಯೇಕ ಮಾಹಿತಿ-
ಗಳನ್ನು ನೀಡಿದೆ.

ಇ) ಈ ಎರಡೂ ವಲಯಗಳಿಂದ ಪೆಚ್ಚವಾದ ಮೊತ್ತದ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಸಣ್ಣ ನೀರಾವರಿ (ದ) ವಲಯ ಬೆಂಗಳೂರು (ಲಕ್ಷ ರೂ.ಗಳಲ್ಲಿ)	ಸಣ್ಣ ನೀರಾವರಿ(ಉ) ವಲಯ ಬಿಜಾಪುರ (ಲಕ್ಷ ರೂ.ಗಳಲ್ಲಿ)
1991-92	3345.88	-
1992-93	5154.07	-
1993-94	3140.86	2868.60

ವಿಷಯ : ಬೆಳಗಾಂ ತಾಲ್ಲೂಕುಗಳಲ್ಲಿನ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :376(732)

ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಹಿರೇಬಾಗೆವಾಡಿ) : ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ರಸ್ತೆಗಳಿವೆ ಮತ್ತು ಅವುಗಳ ವಿವರಗಳೇನು?

ಆ) 1992-93, 1993-94 ಹಾಗೂ 1994-95ರ ಆಯವ್ಯಯದಲ್ಲಿ ಈ ರಸ್ತೆಗಾಗಿ ಒದಗಿಸಿರುವ ಅನುದಾನದ ಮೊತ್ತವೆಷ್ಟು? ಮತ್ತು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಈ ಹದಗೆಟ್ಟಿರುವ ಸೇತುವೆಗಳಿಗೆ ಹಾಗೂ ರಸ್ತೆ ದುರಸ್ತಿಗಾಗಿ ಎಷ್ಟು ಹಣ ವ್ಯಯ ಮಾಡಲಾಗಿದೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬೆಳಗಾಂ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 17 ರಸ್ತೆಗಳು ಇರುತ್ತದೆ.

ಅವುಗಳ ವಿವರವನ್ನು ಅನುಬಂಧದಲ್ಲಿ ಇಡಲಾಗಿದೆ.